ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ವಿಷಯ: ರಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವವರನ್ನು ಸಕ್ರಮ ಗೊಳಿಸುವುದು

260 (3279)

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವ ಕಲ್ಯಾಣ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಅಕ್ರಮ ಸಾಗುವಳಿ ಮಾಡುತ್ತಿರುವವರನ್ನು ಸಕ್ರಮಗೊಳಿಸಲಾಗಿದೆ?

ಆ) ಅದಕ್ಕೆ ಸಂಬಂಧಪಟ್ಟ ಹಾಗೆ ನಿಗದಿ ಪಡಿಸಿದ್ದ ಕೊನೆ ದಿನಾಂಕ ಯಾವುದು?

ಇ) ಬಹುತೇಕ ಅಕ್ರಮ ಸಾಗುವಳಿ ಮಾಡುತ್ತಿರುವವರು ನಿಗದಿತ ದಿನಾಂಕದೊಳಗೆ ಅರ್ಜ ಸಲ್ಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ದಿನಾಂಕವನ್ನು ಮತ್ತೆ ಮುಂದುವರಿಸಲಾಗುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):

ಅ) ಒಟ್ಟು 2,92,941 ಸಾಗುವಳಿದಾರರಿಗೆ ಸಕ್ರಮಗೊಳಿಸಲಾಗಿದೆ.

ಆ) ದಿನಾಂಕ: 9-9-1991.

ಇ) ಹೌದು.

ಈ) ಪರಿಶೀಲಿಸಲಾಗುವುದು.

ವಿಷಯ: ರೈತ ಸಂಜೀವಿನಿ ಯೋಜನೆ.

2602 (2419)

ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತ ಸಂಜೀವಿನಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು? ಈ

ಯೋಜನೆಯಿಂದ ಲಾಭ ಪಡೆದಿರುವವರ ಸಂಖ್ಯೆ ಎಷ್ಟು?

ಆ) ಈ ಯೋಜನೆ ಯಾವಾಗ ತಿದ್ದುಪಡಿ ಮಾಡಲಾಯಿತು, ನಂತರ ಎಷ್ಟು ಜನ ಪ್ರಯೋಜನ ಪಡೆದಿದ್ದಾರೆ.

ಇ) ತಿದ್ದುಪಡಿಯಿಂದ ಬಹಳ ಜನರು ಪ್ರಯೋಜನ ಪಡೆಯುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ತಿದ್ದುಪಡಿ ವಾಪಸ್ಸು ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಈ ಯೋಜನೆಯನ್ನು ದಿನಾಂಕ 1-4-96ರಿಂದ ಜಾರಿಗೆ ತರಲಾಗಿದೆ. ಲಾಭ ಪಡೆದವರ ಸಂಖ್ಯೆ 170

ಆ) ದಿನಾಂಕ 1-4-97ರಿಂದ ಪರಿಷ್ಕೃತಯೋಜನೆ ಜಾರಿಗೆ ತರಲಾಗಿದೆ. ಯೋಜನೆಯನ್ವಯ 8 ಅರ್ಜಿಗಳು ಮಂಜೂರಾತಿಗಾಗಿ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಬಂದಿದ್ದು, ಪರಿಶೀಲನೆಯಲ್ಲಿದೆ.

ಇ) ಇಲ್ಲ.

ವಿಷಯ: ಹಿರೇಕೆರೂರು ಸಬ್-ರಿಜಿಸ್ಟ್ರಾರ್ ಕಛೇರಿಯಲ್ಲಿ ಖಾಲಿ ಇರುವ ಸ್ಥಾನಗಳ ಬಗ್ಗೆ.

2603 (3906)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರು ಉಪ-ನೋಂದಣಿ ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು? ಅವುಯಾವುವು? ಯಾವಾಗಿನಿಂದ ಖಾಲಿ ಇವೆ?

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದೇ?

ಇ) ಖಾಲಿ ಇದ್ದರೂ ಸಹ ಯಾರನ್ನಾದರೂ ನಿಯೋಜನೆ ಮಾಡಲಾಗಿದೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) 2 ಹುದ್ದೆಗಳು ಖಾಲಿ ಇರುತ್ತವೆ. ಅವುಗಳಲ್ಲಿ

1. ಪ್ರಥಮ ದರ್ಜೆ ಸಹಾಯಕರ ಹುದ್ದೆ: ದಿನಾಂಕ 6-8-97ರಿಂದ,